ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯ ಮುನ್ಸಿಪಲ್ ಕಾಲೇಜಿನ ವಾಲಿಬಾಲ್ ಅಂಗಳದಲ್ಲಿ ಕೃಷ್ಣಶಾಸ್ತ್ರಿಗಳು ನನಗೆ ಭೇಟಿಯಾದ ನಂತರದ ದಿನಗಳಲ್ಲಿ, ನಿಮ್ಮ ಗ್ರಾಮದ ಸುತ್ತ ಯಾರಾದರೂ ಜನಪದ ಗಾಯಕಿಯರು ಇರಬಹುದೇ ಎಂದು ಕೇಳಿದೆ. ಅದಕ್ಕೆ ಬೆಳಗೆರೆಯವರು ನಮ್ಮ ಸುತ್ತಿನ ಗ್ರಾಮದಲ್ಲಿ ಜನಪದ ಹಾಡುಗಾರ್ತಿಯರು ಇದ್ದಾರೋ, ಇಲ್ಲವೋ ಆದರೆ ಅಲ್ಲೆಲ್ಲ ಓಡಾಡಿ ಪತ್ತೆ ಮಾಡೋಣ ಬನ್ನಿ ಎಂದರು. ಅಂದಮೇಲೆ ಶಾಸ್ತ್ರಿಗಳಿಗೆ ನನ್ನ ಜತೆ ಜನಪದದ ಹೆಸರು ಹೇಳಿಕೊಂಡು ಓಡಾಡುವ ವಿಚಾರದಲ್ಲಿ ಆಸಕ್ತಿ ಇದೆ ಎಂಬುದು ತಿಳಿಯಿತು.

ಬೆಳಗೆರೆಯವರು ಹಾಗಂದದ್ದೇ, ಮುಂದಿನ ವಾರ ಆ ಮಾರ್ಗದಲ್ಲಿ ಓಡಾಡುವ ಒಂದೇ ಒಂದು ಬಸ್ಸನ್ನು ಹಿಡಿದು ಹೊರಟೆ. ಎಲ್ಲಿ ಅಂದರೆ ಅಲ್ಲಿ ಕೆಟ್ಟು ಹೋಗುತ್ತಿದ್ದ ಆ ಬಸ್ಸು ಬೆಳಗ್ಗೆ ಚಳ್ಳಕೆರೆಯಿಂದ ಹೊರಟು ಬೆಳಗೆರೆ ಮಾರ್ಗವಾಗಿ ಹಳ್ಳಿಗಳ ಮೇಲೆ ಹಿರಿಯೂರು ಕಡೆ ಹೊರಟು ರಾತ್ರಿ ಎಂಟಕ್ಕೆ ಹೋದ ಮಾರ್ಗದಲ್ಲಿಯೇ ವಾಪಸಾಗಿ ಚಳ್ಳಕೆರೆ ಸೇರುತ್ತಿತ್ತು. ಕೃಷ್ಣಶಾಸ್ತ್ರಿಗಳು ನನಗೆ ಎಲ್ಲಿ ಇಳಿಯಬೇಕೆಂದು ಹೇಳಿದ್ದರು. ಕಂಡಕ್ಟರನನ್ನು ಕೇಳಿಕೊಂಡು ಬೆಳಗೆರೆಯಿಂದ ಆಚೆ ಕೃಷ್ಣಶಾಸ್ತ್ರಿಗಳೇ ಸ್ಥಾಪಿಸಿದ್ದ ಬೆಳಗೆರೆ ಸೀತಾರಾಮಶಾಸ್ತ್ರಿ ಪ್ರೌಢಶಾಲೆಯ ಕಡೆ ಇಳಿದು ನಡೆದೆ.

ಶಾಲೆಯೆದುರು ಬಹಳ ವಿಸ್ತಾರವಾದ ಮೈದಾನ. ಬೆಳಗೆರೆ ಮತ್ತು ನಾರಣಾಪುರ ಎಂಬ ಎರಡು ಗ್ರಾಮಗಳ ಮಧ್ಯೆ ಬೆಳಗೆರೆಯವರ ಶಾಲೆ. ಅದರ ಪಕ್ಕ ಅವರ ತೋಟ ಮತ್ತು ವಾಸಸ್ಥಳವಿತ್ತು. ಬೆಳಗೆರೆ ಸೀತಾರಾಮಶಾಸ್ತ್ರೀ ಪ್ರೌಢಶಾಲೆಯಲ್ಲಿ ಆಗಲೇ ನೂರೈವತ್ತರಿಂದ ಇನ್ನೂರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಸುಮಾರು ಎಂಬತ್ತು ವಿದ್ಯಾರ್ಥಿಗಳು ವಸತಿನಿಲಯದಲ್ಲಿದ್ದರು. ಆ ಉಚಿತ ನಿಲಯಕ್ಕೆ ಶಾಸ್ತ್ರಿಗಳು ಸರ್ಕಾರದಿಂದ ಅನುದಾನ ಪಡೆಯುತ್ತಿರಲಿಲ್ಲ. ಬೆಳಗೆರೆಯ ಪ್ರಾಥಮಿಕ ಶಾಲೆಯಲ್ಲಿ ಪಾಸಾದವರು ಮುಂದೆ ಹೈಸ್ಕೂಲು ಸೇರಲು ಸಾಧ್ಯವೇ ಇಲ್ಲದ ಪರಿಸ್ಥಿತಿಯಲ್ಲಿ ಕೃಷ್ಣಶಾಸ್ತ್ರಿಗಳು ತಮ್ಮ ಸಹೋದರ ಸೀತಾರಾಮಶಾಸ್ತ್ರಿಗಳಿಂದ ಹಣ ಪಡೆದು ಪ್ರೌಢಶಾಲೆ ಆರಂಭಿಸಿದರು. ಈ ಶಾಲೆಯ ಆವರಣದಿಂದ ಶಾಸ್ತ್ರಿಯವರ ಮನೆಯ ಜಾಗವನ್ನು ಕಾಣುತ್ತ ಹೊರಟೆ.

ಸಾಮಾನ್ಯವಾಗಿ ರಜೆಯ ದಿನದಲ್ಲಿ ನಾನು ಸಂಚಾರ ಹೊರಡುತ್ತಿದ್ದೆ. ಶಾಸ್ತ್ರಿಯವರ ವಾಸ್ತವ್ಯದ ಕಡೆಗೆ ಹೋದದ್ದು 1974ರ ಶನಿವಾರ ಮಾರ್ಚ್ ತಿಂಗಳ ಕೊನೆಯ ವಾರ. ಅವರು ವಾಸವಾಗಿದ್ದುದು ಊರ ಹೊರವಲಯದಲ್ಲಿ. ಅವರದೊಂದು ತೋಟ. ಇತ್ತ ಕಡೆ ಭತ್ತದ ಪೈರು, ಬಲಗಡೆಗೆ ರಾಗಿ. ಬದುವಿನ ಮೇಲೆ ನಡೆದರೆ ಎರಡು ಗುಡಿಸಲು ಕಾಣಿಸಿದವು. ಸ್ವಲ್ಪ ತಗ್ಗು ಪ್ರದೇಶದಲ್ಲಿ ದೊಡ್ಡ ಗುಡಿಸಲು. ಒಂದು ಭಾಗ ದನ, ಎಮ್ಮೆ, ಕರು ಕಟ್ಟಿಹಾಕುವ ಜಾಗ. ಇನ್ನರ್ಧ ಅಡುಗೆ ಮಾಡಿಕೊಳ್ಳುವಂಥದ್ದು. ಒಳಗೆಲ್ಲ ನೆಲಕ್ಕೆ ಸೆಗಣಿ ಬಳಿದು ಸಾರಿಸಲಾಗಿತ್ತು. ಇಲ್ಲಿಂದ ಹತ್ತಿಪತ್ತು ಹೆಜ್ಜೆ ದೂರಕ್ಕೆ ಪುಟ್ಟ ದಿಬ್ಬದ ಮೇಲೆ ಕೃಷ್ಣಶಾಸ್ತ್ರಿಗಳ ಗುಡಿಸಲು. ಅದು ಒಂದಂಕಣದ್ದು. ಹತ್ತು ಅಡಿ ಅಗಲ ಹತ್ತು ಅಡಿ ಉದ್ದ. ಸುತ್ತ ನಾಲ್ಕು ಅಡಿ ಎತ್ತರದ ಗೋಡೆಗೆ ತೆಂಗಿನ ಮಟ್ಟಾಳೆ ಮುಚ್ಚಲಾಗಿತ್ತು. ನೆಲಗೋಡೆಗೆಲ್ಲ ಸೆಗಣಿ. ಒಳಗೆ ಎರಡು ಚಾಪೆ ದಿಂಬು ಬಿಟ್ಟರೆ ಬೇರೇನೂ ಇಲ್ಲ. ಎಲ್ಲಕ್ಕಿಂತ ಮುಖ್ಯ ಎರಡೂ ಗುಡಿಸಲಿಗೆ ಬಾಗಿಲೇ ಇರಲಿಲ್ಲ. ಕೃಷ್ಣಶಾಸ್ತ್ರಿಗಳ ಗುಡಿಸಲ ಪಕ್ಕಕ್ಕೆ ಕಪಿಲೆ ಬಾವಿ. ಅದಕ್ಕೆ ಪಂಪ್ಸೆಟ್ ಅಳವಡಿಸಲಾಗಿದ್ದಿತು. ಬಾವಿಯಿಂದ ಎತ್ತಿದ ನೀರು ಕೃಷ್ಣಶಾಸ್ತ್ರಿಗಳ ಗುಡಿಸಲ ಹಿಂಭಾಗದಿಂದಲೇ ಹರಿದು ತೋಟಕ್ಕೆ ಹೋಗಬೇಕಾಗಿತ್ತು. ನೀರಿನ ಕಾಲುವೆಯ ಬದಿಗೆ ಬೆಳೆದಿದ್ದ ಮರಗಳು ಶಾಸ್ತ್ರಿಗಳ ಗುಡಿಸಲನ್ನು ನಿರಂತರ ತಂಪಾಗಿರಿಸಿದ್ದವು.